

# ಗರ್ಭಿಣಿಯರನ್ನು ಕಾಡುವ ಮೈಕಡಿತ

ಗರ್ಭಧಾರಣೆಯಲ್ಲಿ ಉಬ್ಬುತ್ತಿರುವ ಹೊಟ್ಟೆ ಹಾಗೂ ಸ್ತನಗಳ ಬೆಳವಣಿಗೆಯಿಂದ ಚರ್ಮ ಹಿಗ್ಗಿದಾಗ ಅಲ್ಲಲ್ಲಿ ಮೈಕಡಿತ ಸಹಜವಾಗಿ ಉಂಟಾಗುತ್ತದೆ. ಕೆಲವೊಮ್ಮೆ ಬೇರೆ ಕಾರಣಗಳಿಗೂ ಮೈಕಡಿತ ಬರಬಹುದು. ಸೂಕ್ತ ತಪಾಸಣೆ ಹಾಗೂ ಚಿಕಿತ್ಸೆಯಿಂದ ಇದನ್ನು ಪರಿಹರಿಸಬಹುದು.

■ ಡಾ. ವೀಣಾ ಭಟ್ ಭದ್ರಾವತಿ

ಗೆಳತಿ ವತ್ಸಲಾ ಎಂಟು ತಿಂಗಳ ಗರ್ಭಿಣಿ ಇರುವಾಗಲೇ ಅವಳಿಗೆ ಸಿಸೇರಿಯನ್ ಶಸ್ತ್ರಚಿಕಿತ್ಸೆ ಮಾಡಿ ಮಗುವನ್ನು ತೆಗೆಯಲಾಯಿತು. ಬಿಹಾರದಲ್ಲಿರುವ ಆಕೆಗೆ ಕಳೆದ ಒಂದು ತಿಂಗಳಿಂದ ಮೈಯೆಲ್ಲಾ ಕಡಿತವಾಗಿದ್ದು ಹೆರಿಗೆಯ ನಂತರ ಕಡಿಮೆಯಾಗಿದೆ. ಹೀಗೆ ಯಾಕೆ ಆಗುತ್ತದೆ ಎಂದು ವಿಚಾರಿಸಿದಳು. ಇದೇ ರೀತಿ ಇನ್ನೂ ಹಲವು ಗರ್ಭಿಣಿಯರು ಮೈಯೆಲ್ಲಾ ಕಡಿತವಾಗುತ್ತಿದೆ ಎಂದು ಸ್ತ್ರೀರೋಗ ತಜ್ಞರು ಹಾಗೂ ಚರ್ಮ ರೋಗದವರ ಹತ್ತಿರ ಬರುತ್ತಾರೆ.

## ಏನಿದು ಗರ್ಭಿಣಿಯರ ಮೈಕಡಿತ?

ಗರ್ಭಧಾರಣೆಯಾದ ಶೇಕಡಾ 20ರಿಂದ 23ರಷ್ಟು ಮಹಿಳೆಯರಲ್ಲಿ ಒಣ ಚರ್ಮದಿಂದ ಸ್ವಲ್ಪ ಮೈಕಡಿತವಾಗುವುದರಿಂದ ಹಿಡಿದು ಹಲವು ಸಂದರ್ಭಗಳಲ್ಲಿ ತೀವ್ರ ತರವಾದ ಕಡಿತ ಉಂಟಾಗುತ್ತದೆ. ಇದೇ ಅವರ ನಿದ್ರೆಯನ್ನೂ ಕೆಡಿಸಿ ದಿನಚರಿಯನ್ನೇ ಏರುಪೇರು ಮಾಡಿ ಖಿನ್ನತೆಯನ್ನೂ ಹೆಚ್ಚಿಸುತ್ತದೆ. ಇನ್ನು ಕೆಲವರಲ್ಲಿ ಗರ್ಭಸ್ಥ ತಾಯಿಗಷ್ಟೇ ಕಿರಿಕಿರಿಯನ್ನುಂಟು ಮಾಡುವುದಲ್ಲದೇ ಹುಟ್ಟಲಿರುವ ಮಗುವಿಗೂ ತೊಂದರೆಯನ್ನುಂಟು ಮಾಡಬಹುದು. ಹಾಗಾಗಿ ರೋಗಿಗಳಿಗೂ ಈ ಬಗ್ಗೆ ಅರಿವಿದ್ದು, ವೈದ್ಯರೂ ಕೂಡಾ ಕೂಲಂಕುಷವಾಗಿ ತಪಾಸಣೆ ಮಾಡುವ ಅಗತ್ಯವಿದೆ.

ಗರ್ಭಧಾರಣೆಯಲ್ಲಿ ಉಬ್ಬುತ್ತಿರುವ ಹೊಟ್ಟೆ ಹಾಗೂ ಸ್ತನಗಳ ಬೆಳವಣಿಗೆಯಿಂದ ಚರ್ಮ ಹಿಗ್ಗಿದಾಗ ಅಲ್ಲಲ್ಲಿ ಮೈಕಡಿತ ಸಹಜವಾಗಿ ಉಂಟಾಗಬಹುದು. ಇನ್ನು ಕೆಲವು ಗರ್ಭಿಣಿಯರಲ್ಲಿ ಪಾದ ಹಸ್ತಗಳು ಕೆಂಪಾಗಿದ್ದು ಮೈ ಕಡಿತ ಉಂಟಾಗುವುದು, ಇದು ಈಸ್ಟ್ರೋಜನ್ ಹಾರ್ಮೋನುಗಳ ಹೆಚ್ಚಳದಿಂದಾಗಿ ಆಗುವಂಥದ್ದು. ಇದು ಹೆರಿಗೆಯ ನಂತರ ಇರುವುದಿಲ್ಲ. ಗರ್ಭಧಾರಣೆಗಿಂತ ಮೊದಲೇ ಇರುವ ಕಜ್ಜಿ ಹಾಗೂ ಸೋರಿಯಾಸಿಸ್ ಇತ್ಯಾದಿಗಳು ಗರ್ಭಿಣಿಯರಲ್ಲಿ (ಕೆಲವರಲ್ಲಿ) ಹೆಚ್ಚಾಗಬಹುದು, ಇನ್ನು ಕೆಲವರಲ್ಲಿ ಕಡಿಮೆಯೂ ಆಗಬಹುದು.

ಇವುಗಳಲ್ಲದೆ ಗರ್ಭಧಾರಣೆಗೇ ಸೀಮಿತವಾದ ಕೆಲವು ಮೈ ಕಡಿತವನ್ನುಂಟು ಮಾಡುವ ಸ್ಥಿತಿಗಳಿವೆ.

## ಗರ್ಭಧಾರಣೆಯಲ್ಲಾಗುವ ಪ್ರುರಿಗೋ

ಈ ಸ್ಥಿತಿಯು ಗರ್ಭಧಾರಣೆಯಾಗಿ 6 ತಿಂಗಳೊಳಗೆ ಅಥವಾ 7–8 ತಿಂಗಳಲ್ಲಿ ಕಾಣಿಸಿಕೊಳ್ಳಬಹುದು. (ಕೆಲವರು ಇದನ್ನು ಅಟೋಪಿಕ್ ಗರ್ಭಧಾರಣೆಯ ಗುಳ್ಳೆಗಳು ಎಂದೂ ಕರೆಯುತ್ತಾರೆ.) ಶೇ.80ರಷ್ಟು ಸಂದರ್ಭಗಳಲ್ಲಿ ಮೊದಲ ಬಾರಿಗೆ ಗರ್ಭ ಧರಿಸಿದವರಲ್ಲಿ ಅದೂ ಚಿಕ್ಕಪ್ರಾಯದವರಲ್ಲಿ ಕಾಣಿಸಿಕೊಳ್ಳುತ್ತದೆ. ಇನ್ನು ಶೇ.20 ರಷ್ಟು ಜನರಲ್ಲಿ ಮೊದಲೇ ಅಟೋಪಿಕ್ ಇದ್ದು ನಂತರ ಹೆಚ್ಚಾಗಬಹುದು. ಈ ಸ್ಥಿತಿಯು ಸಣ್ಣ ಉಬ್ಬುಗಳಲ್ಲಿ ಹುಳ ಕಡಿತದ ಹಾಗೆ ಕಾಣಿಸಿಕೊಂಡು ನಂತರ ಗಾಯವಾಗಿ ಮೇಲ್ಭಾಗ ಗಟ್ಟಿಯಾಗಿ ನಂತರ ದೇಹದ ಮೇಲೆಲ್ಲಾ ಆಗಬಹುದು. ಇಲ್ಲಿ ಮಗುವಿಗೆ ಯಾವುದೇ ತೊಂದರೆಯಿಲ್ಲ. ಚಿಕಿತ್ಸೆಯಾಗಿ ಗಾಯಗಳಿಗೆ ಮುಲಾಮು ಮತ್ತು ಮಾತ್ರೆಗಳು ಕೆಲವೊಮ್ಮೆ ಸ್ಟೀರಾಯ್ಡ್ ಮಾತ್ರೆಗಳನ್ನೂ ನುಂಗಲು ಕೊಡಬೇಕಾಗಬಹುದು.

## ಬಹುರೂಪಿ ಗುಳ್ಳೆಗಳು

ಗರ್ಭಿಣಿಯರ ಸಾಮಾನ್ಯ ತೊಂದರೆಗಳಲ್ಲಿ ಇದು ಒಂದಾಗಿದೆ. 160ರಲ್ಲಿ ಒಬ್ಬರಿಗೆ (ಕಪ್ಪು ಜನಾಂಗದಲ್ಲಿ ಇದು ಕಡಿಮೆ) ಈ ತೊಂದರೆ ಕಾಡಬಹುದು. ಇದೊಂದು ಸೌಮ್ಯ ಸ್ವರೂಪದ ಕಾಯಿಲೆಯಾಗಿದ್ದು ಕೊನೆಯ 3 ತಿಂಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡು ಮಾತೆಯಂದಿರಿಗೆ ಆತಂಕವನ್ನುಂಟು ಮಾಡಬಹುದು. ಆದ್ದರಿಂದ ಈ ಬಗ್ಗೆ ಅರಿವು ಮೂಡಿಸಿ ತಾಯಿ ಹಾಗೂ ಮಗುವಿಗೆ ಯಾವುದೇ ತೊಂದರೆಯಿಲ್ಲ ಎಂದು ಭರವಸೆ ನೀಡುವುದು ಮುಖ್ಯ.

## ಇದು ಯಾರಲ್ಲಿ ಹೆಚ್ಚು?

ಇದು ಅವಳಿ– ತ್ರಿವಳಿ ಮಕ್ಕಳಿರುವ ಗರ್ಭಿಣಿಯರಲ್ಲಿ ಹೆಚ್ಚು ಕಂಡು ಬಂದು (ಶೇ. 11.7 ರಷ್ಟು) ಗರ್ಭಾವಸ್ಥೆಯಲ್ಲಿ ಹೆಚ್ಚು ತೂಕ ಗಳಿಸಿದವರಲ್ಲಿ, ಗಂಡು ಮಗುವಿದ್ದಾಗ, ಬಿಳಿ ಬಣ್ಣದ ಮಹಿಳೆಯಲ್ಲಿ ಹೆಚ್ಚು ಕಂಡು ಬರುತ್ತದೆ. ಗರ್ಭಸ್ಥ ಶಿಶುವಿನ ಬೆಳವಣಿಗೆಯಿಂದ ಹೊಟ್ಟೆ ಬಿರಿತ ಹೆಚ್ಚಾದಾಗ ಸಂಯೋಜಕ ಅಂಗಾಂಶದ ಬಿರಿತ ಉಂಟಾಗಿ, ಅಲರ್ಜಿಕಾರಕ ಪ್ರತಿಕ್ರಿಯೆಯಾಗಿ ಆಗ

